



# ವ್ಯೋಮದರ್ಶಿನಿ

## ಖಗೋಳ ಜ್ಞಾನಕ್ಕೆ ಕೃತಕ ತಾರಾಲಯ

■ ಗಣಪತಿ ಹಾಸ್ಪುರ

ಆಗಸದ ವಿದ್ಯಮಾನಗಳ ಬಗ್ಗೆ ಅರಿಯಲೆಂದೇ ವಿಶೇಷವಾದ ಲಘು ತಾರಾಲಯವೊಂದು ಯಲ್ಲಾಪುರದಲ್ಲಿ ರೂಪುಗೊಂಡಿದೆ. ಕಡಿಮೆ ಖರ್ಚಿನಲ್ಲಿ ವಿನ್ಯಾಸಗೊಳಿಸಲಾಗಿರುವ ಈ ತಾರಾಲಯ ಸುತ್ತಮುತ್ತಲಿನವರ ಗಮನಸೆಳೆಯುತ್ತಿದೆ.

ಉಮ್ಮಚಗಿಯ ಕಾಗಾರಕೊಡ್ಲಿನಲ್ಲಿರುವ ಸುಮೇರು ಜ್ಯೋತಿರ್ವನದಲ್ಲಿ ರೂಪಿಸಲಾಗಿರುವ ಈ ಕೃತಕ ತಾರಾಲಯದಲ್ಲಿ ಕುಳಿತು ಆಕಾಶದ ವಿದ್ಯಮಾನಗಳ ಬಗ್ಗೆ ತಿಳಿವಳಿಕೆ ಪಡೆಯಬಹುದಾಗಿದೆ. ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಉಮ್ಮಚಗಿಯ 'ಶ್ರೀಮಾತಾ ಸಂಸ್ಕೃತ ಪಾಠಶಾಲೆ'ಯ ಪ್ರಾಧ್ಯಾಪಕ ನಾಗೇಶ ಭಟ್ ಕೆ.ಸಿ. ಈ ತಾರಾಲಯದ ರೂವಾರಿ. ತಮ್ಮ ಪಾಂಡಿತ್ಯ, ಭಾರತೀಯ ಜ್ಯೋತಿರ್ವಿಜ್ಞಾನ ಶಾಸ್ತ್ರದ ಆಧಾರದಲ್ಲಿ ಅತಿ ಸುಲಭದಲ್ಲಿ ಗ್ರಹಗಳು, ನಕ್ಷತ್ರಗಳ ಬಗ್ಗೆ ಸಾಮಾನ್ಯರಿಗೆ ತಿಳಿಸಿಕೊಡಲು ತಮ್ಮ ಮನೆಯಂಗಳದಲ್ಲಿಯೇ ಲಘು ತಾರಾಲಯ ನಿರ್ಮಿಸಿದ್ದಾರೆ.



ವ್ಯೋಮದರ್ಶಿನಿಯ ಒಳಗೆ

ಯಲ್ಲಾಪುರದ ತಾರಾಲಯದಲ್ಲಿ ಆಧುನಿಕ ಯಂತ್ರೋಪಕರಣಗಳಿಲ್ಲ. ಸುಧಾರಿತ ಕಟ್ಟಡವಾಗಲಿ, ಹೈಫೈ ವಸ್ತುಗಳಾಗಲಿ ಇಲ್ಲ. ನಮ್ಮ ಸುತ್ತಮುತ್ತ ಸಿಗುವ ಸಂಪನ್ಮೂಲಗಳನ್ನೇ ಬಳಸಿಕೊಂಡಿರುವುದು ವಿಶೇಷ. ಪಿವಿಸಿ ಪೈಪ್‌ನಿಂದ ದೊಡ್ಡದಾದ ಭೂಮಂಡಲದಂತೆ ಮಾಡಿ ಅದರ ಸುತ್ತ ಬಿಳಿ ಬಟ್ಟೆ ಹೊದೆಸಿದ್ದಾರೆ. ತಾರಾಲಯದ ನಿರ್ಮಾಣಕ್ಕಾಗಿ 140 ಮೀಟರ್ ಬಿಳಿ ಬಟ್ಟೆಯನ್ನು ನಿರ್ದಿಷ್ಟ ಆಕೃತಿಯಲ್ಲಿ ಕತ್ತರಿಸಿ ಹೊಲಿಯಲಾಗಿದೆ.

ಪಿವಿಸಿ ಪೈಪ್, ಕಬ್ಬಿಣದ ರಾಡ್, ಬಿಳಿ ಬಟ್ಟೆ, ಪ್ಲಾಸ್ಟಿಕ್ ಬಿಂದಿಗೆ ಇತ್ಯಾದಿ ಸರಳ ಸಾಧನಗಳನ್ನು ಬಳಸಿ ಕೃತಕ ತಾರಾಲಯ ನಿರ್ಮಿಸಲಾಗಿದೆ. ಏಕಕಾಲಕ್ಕೆ 60 ಜನ ಕುಳಿತು ವೀಕ್ಷಿಸಬಹುದಾಗಿದೆ.

ಆಕಾಶದ ವಿದ್ಯಮಾನಗಳ ಕುರಿತು ಕುತೂಹಲ, ಆಸಕ್ತಿ ಹೊಂದಿರುವವರಿಗೆ ಈ ಲಘು ತಾರಾಲಯದಲ್ಲಿ ಗ್ರಹ, ನಕ್ಷತ್ರ, ರಾಶಿ ಮೊದಲಾದ ವಿಚಾರಗಳನ್ನು ಸರಳವಾಗಿ ತಿಳಿಸಿಕೊಡಲಾಗುತ್ತಿದೆ. ಅಶ್ವಿನಿ, ಭರಣಿ ಇತ್ಯಾದಿ 27 ನಕ್ಷತ್ರಪುಂಜಗಳನ್ನು, ಅವುಗಳ ಆಕೃತಿಗಳನ್ನು ಇಲ್ಲಿ ಸ್ಪಷ್ಟವಾಗಿ ನೋಡಬಹುದು ಎಂದು ವಿವರಣೆ ನೀಡುತ್ತಾರೆ ಅವರು.

ಹನ್ನೆರಡು ರಾಶಿಗಳ ವಿಭಾಗ ಮಾಡಿದ ಬಗೆ, ನಾವು ಲೆಕ್ಕಿಸುವ ಸಮಯವನ್ನು ವೃತ್ತಗಣಿತದಿಂದ ನಿರ್ಣಯಿಸಿದ ಬಗೆ, ಸೂರ್ಯನು ಮೇಷದಿಂದ ಸಂಕ್ರಾಂತಿ ವೃತ್ತಕ್ಕೆ ಬರುವುದು ಹೇಗೆ... ಸೂರ್ಯೋದಯ, ಸೂರ್ಯಾಸ್ತ, ಗ್ರಹಗಳ ಕಲ್ಪನೆ, ಅಮಾವಾಸ್ಯೆ, ಹುಣ್ಣಿಮೆ, ಸೂರ್ಯ–ಚಂದ್ರ ಗ್ರಹಣಗಳು ಸಂಭವಿಸುವ ವಿಧಾನ... ಹೀಗೆ ಹಲವು ಸಂಗತಿಗಳನ್ನು ಈ 'ವ್ಯೋಮದರ್ಶಿನಿ' ಎಂಬ ಲಘು ತಾರಾಲಯದಲ್ಲಿ ನೋಡಿ ತಿಳಿಯಬಹುದಾಗಿದೆ. ■


ಕೇಶ ಸಂರಕ್ಷಣೆ
ಆಯುರ್ವೇದ ರೀತ್ಯಾ ತೈಲಪಾಕ ವಿಧಿಯಿಂದ ಮಾಡಲಾದ
ಮಂಜುಶ್ರೀ ಹೇರ್ ಆಯಿಲ್




Scan here for more details
ಉಪಯೋಗಗಳು:
ಕೂದಲಿಗೆ ಆರೋಗ್ಯ ವರ್ಧಕ
ಕೂದಲುಗಳ ನೈಸರ್ಗಿಕ ಸಂರಕ್ಷಣೆ
For external use only.
ವಿಡಂಗ, ಕೃಷ್ಣ ಜೀರಕ, ಬಿಲ್ವ, ಬಲಮೂಲ, ಅಮೃತ ಬಳ್ಳಿ, ತ್ರಿಫಲಾ, ಶತಾವರಿ ಮುಂತಾದ ಆಯುರ್ವೇದ ಗಿಡಮೂಲಿಕೆ ಮತ್ತು ಪರಿಶುದ್ಧವಾದ ತೆಂಗಿನಎಣ್ಣೆಯನ್ನು ಉಪಯೋಗಿಸಿ ಶಾಸ್ತ್ರೋಕ್ತವಾಗಿ ತಯಾರಿಸಲಾಗಿದೆ.
ತಯಾರಕರು
SDM AYURVEDA PHARMACY
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಉಡುಪಿ–574 118, ಕರ್ನಾಟಕ.
Customer Care: +91 89709 77513
Email: sdmaph@sdmayurvedacollegeudupi.in
https://sdmayupharmacy.com
ISO 9001:22000 & GMP CERTIFIED
U.I.N:KA/010/04/22